APRIL 11, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **2025–30ನೇ ಸಾಲಿನ, ನೂತನ ಕೈಗಾರಿಕಾ ನೀತಿ; ಹೂಡಿಕೆ, ಉದ್ಯೋಗ ಸೃಷ್ಟಿ ಹಾಗೂ ಸಮತೋಲಿತ ಬೆಳವಣಿಗೆಗೆ ಒತ್ತು – ಎಂ.ಬಿ.ಪಾಟೀಲ.**
- **2024–25ನೇ ಸಾಲಿನ, ಪಂಪ ಪ್ರಶಸ್ತಿ; ಬನವಾಸಿಯಲ್ಲಿ ನಾಳೆ, ಬಿ.ಎ. ವಿವೇಕ ರೈ ಅವರಿಗೆ, ಮುಖ್ಯಮಂತ್ರಿ ಪ್ರದಾನ.**
- **ಸರೋದ ಮಾಂತ್ರಿಕ, ಪಂಡಿತ ರಾಜೀವ ತಾರಾನಾಥ ಕುರಿತ, ಪುಸ್ತಕ ಹಾಗೂ ಕಿರುಚಿತ್ರ, ಧಾರವಾಡದಲ್ಲಿ ಇಂದು, ಚಂದ್ರಶೇಖರ ಕಂಬಾರ, ಬಿಡುಗಡೆ.**
- **ಈ ತಿಂಗಳ 14ರ ವರೆಗೆ, ರಾಷ್ಟ್ರೀಯ ಕೈಮಗ್ಗ ಜಾಗ್ರತಿ ಸಪ್ತಾಹ ಆಚರಣೆ.**

<><><>

**ಈಗ ವಾರ್ತೆಗಳ ವಿವರ**

<><><>

**2025–30ನೇ ಸಾಲಿನ, ನೂತನ ಕೈಗಾರಿಕಾ ನೀತಿ, ‘ಬಿಯಾಂಡ್ ಬೆಂಗಳೂರು’ ಆಲೋಚನೆಯೊಂದಿಗೆ, 2ನೇ ಹಂತ ಮತ್ತು 3ನೇ ಹಂತದ ನಗರಗಳಲ್ಲಿ, ಕೈಗಾರಿಕೆಗಳನ್ನು ಉತ್ತೇಜಿಸಲಿದೆ ಎಂದು, ಕೈಗಾರಿಕಾ ಖಾತೆ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ. ಉದ್ಯೋಗ ಸೃಷ್ಟಿ, ಹೂಡಿಕೆ ಹಾಗೂ ಸಮತೋಲಿತ ಬೆಳವಣಿಗೆಯ ಕಡೆಗೆ, ಗಮನ ಹರಿಸಿದ್ದು, ಭಾರತದ ಮುಂಚೂಣಿ ಕೈಗಾರಿಕಾ ಶಕ್ತಿ ಕೇಂದ್ರವಾಗಲು, ಕರ್ನಾಟಕ ಸಜ್ಜಾಗಿದೆ. ಇದು ಕೇವಲ ನೀತಿ ಅಲ್ಲ, ಭವಿ ್ಯದ ಹೊಸ ಭರವಸೆ ಎಂದಿದ್ದಾರೆ. ನೂತನ ಕೈಗಾರಿಕಾ ನೀತಿ, ಸ್ಥಳೀಯ ಹೂಡಿಕೆದಾರರಿಗೆ ಪ್ರೋತ್ಸಾಹ ನೀಡುವ ಜೊತೆಗೆ, ಮಹಿಳಾ ಉದ್ಯಮಿಗಳಿಗೆ, ವಿಶೇ ್ ಸೌಲಭ್ಯ, ತಂತ್ರಜ್ಞಾನ ಹಾಗೂ ನಾವಿನ್ಯತೆ ಪ್ರಾಧಾನ್ಯ ನೀಡಲಾಗುವುದು, ಎಂದು ಎಕ್ಸ್ ಮಾಧ್ಯಮದಲ್ಲಿ ಸಚಿವರು ಪ್ರಕಟಿಸಿದ್ದಾರೆ.**

<><><>

ಮನೆ ಬಾಗಿಲಲ್ಲಿಯೇ 15 ಅನಾರೋಗ್ಯ ಸಮಸ್ಯೆಗಳನ್ನು ಪತ್ತೆ ಹಚ್ಚಿ, ಸೂಕ್ತ ಚಿಕಿತ್ಸೆ ಮತ್ತು ಔಷಧೋಪಚಾರ, ಉಚಿತವಾಗಿ ಶ್ರೀಸಾಮಾನ್ಯರಿಗೆ ಒದಗಿಸುವ, ಗೃಹ ಆರೋಗ್ಯ ಯೋಜನೆ, ಮುಂಬರುವ 15 ದಿನಗಳಲ್ಲಿ, ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಜಾರಿಗೊಳ್ಳಲಿದೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ ತಿಳಿಸಿದ್ದಾರೆ. ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ನಗರದ, ಸಾರ್ವಜನಿಕ ಆಸ್ಪತ್ರೆ ಆವರಣದಲ್ಲಿ, ಪ್ರಧಾನಮಂತ್ರಿ ಮೂಲಸೌಕರ್ಯ ಮಿಷನ್ ಯೋಜನೆ ಅಡಿ, 50 ಹಾಸಿಗೆಗಳ ತೀವ್ರ ನಿಗಾ ಆರೈಕೆ ಘಟಕಕ್ಕೆ, ಶಂಕುಸ್ಥಾಪನೆ ನೆರವೇರಿಸಿ, ಅವರು ಮಾತನಾಡಿದರು. ಕೋಲಾರ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಂಡ ಈ ಯೋಜನೆ, ಯಶಸ್ವಿಯಾಗಿದೆ. ಬಡವರು ಮತ್ತು ಮಧ್ಯಮ ವರ್ಗದವರ, 15 ಅನಾರೋಗ್ಯಗಳಿಗೆ, ಮನೆ ಬಾಗಿಲಲ್ಲಿ, ಉಚಿತ ಚಿಕಿತ್ಸೆ ಹಾಗೂ ಔಷಧಿ ವಿತರಿಸಲಾಗುವುದು ಎಂದರು.

<><><>

ಮಂಡ್ಯ ಜಿಲ್ಲೆ, ನಾಗಮಂಗಲದ ಅಂಚೆ ಭುವನಹಳ್ಳಿಯಲ್ಲಿ, 'ಕೃಷಿ ಕವಚ ಕಾರ್ಯಕ್ರಮದಡಿ', 'ಕಂದಕ ಬದು ನಿರ್ಮಾಣ ಕಾಮಗಾರಿ'ಗೆ, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ಚಾಲನೆ ನೀಡಿದರು. ಹೊಲದಲ್ಲಿ ಬದುಗಳ ನಿರ್ಮಾಣದಿಂದ, ಮಳೆ ನೀರನ್ನು ತಡೆದು, ಶೇಖರಿಸಿ, ಮಣ್ಣಿನ ಸವಕಳಿ ತಡೆದು, ಫಲವತ್ತತೆ ಮತ್ತು ಆರ್ದ್ರತೆ ಉಳಿಸಿಕೊಳ್ಳಲು, ಕಂದಕ ಬದುಗಳು ಸಹಕಾರಿ ಎಂದು, ಸಚಿವರು ಹೇಳಿದರು.

<><><>

ಮಕ್ಕಳು, ಯುವ ಜನತೆ ಸೇರಿದಂತೆ, ಮಹಿಳೆಯರು, ವಯೋವೃದ್ಧರೂ, ಗ್ರಾಮೀಣ ಅರಿವು ಕೇಂದ್ರಗಳಲ್ಲಿ, ಆಸಕ್ತಿಯಿಂದ ಪಾಲ್ಗೊಂಡು, ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳುತ್ತಿರುವುದು ಸಾರ್ಥಕ್ಯದ ಭಾವ ಮೂಡಿಸಿದೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ, ಪ್ರಿಯಾಂಕ ಖರ್ಗೆ, ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, ತಿಳಿಸಿದ್ದಾರೆ.

<><><>

ಈ ಮಧ್ಯೆ, ಕೊಪ್ಪಳ ಜಿಲ್ಲೆಯ 153 ಗ್ರಾಮ ಪಂಚಾಯತಿಗಳಲ್ಲಿ, 'ಟಾಟಾ ಕಲಿಕಾ ಟ್ರಸ್ಟ್' ಸಹಯೋಗದಲ್ಲಿ, 300ಕ್ಕೂ ಹೆಚ್ಚು ಮಕ್ಕಳು, ಮನೆಯಲ್ಲಿಯೇ ಗ್ರಂಥಾಲಯ ನಿರ್ಮಿಸಿಕೊಂಡಿದ್ದಾರೆ ಎಂದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದೆ.

<><><>

2024–25ನೇ ಸಾಲಿನ, ಪಂಪ ಪ್ರಶಸ್ತಿಯನ್ನು, ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಉಪ ಕುಲಪತಿ ಬಿ.ಎ. ವಿವೇಕ ರೈ ಅವರಿಗೆ, ಉತ್ತರಕನ್ನಡ ಜಿಲ್ಲೆ, ಶಿರಸಿ ತಾಲೂಕು, ಬನವಾಸಿಯಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ ಸಂಜೆ 5 ಗಂಟೆಗೆ ಪ್ರದಾನ ಮಾಡಿ, ಗೌರವಿಸಲಿದ್ದಾರೆ. ಬನವಾಸಿ ಅಭಿವೃದ್ಧಿ ಪ್ರಾಧಿಕಾರ ಆಯೋಜಿಸಿದ, ಕದಂಬೋತ್ಸವ–2025ರ ಅಂಗವಾಗಿ, ಮಯೂರ ವರ್ಮ ವೇದಿಕೆಯಲ್ಲಿ, ಎರಡು ದಿನಗಳ ವಿಶೇಷ ಕಾರ್ಯಕ್ರಮ ಆಯೋಜಿತವಾಗಿದೆ. ಯಲ್ಲಾಪುರ, ಮುಂಡಗೋಡ ಶಾಸಕ ಅರಬೈಲ್ ಶಿವರಾಮ ಹೆಬ್ಬಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

<><><>

ಮೈಸೂರಿನ, ಪಂಡಿತ ರಾಜೀವ ತಾರಾನಾಥ ಮೆಮೋರಿಯಲ್ ಟ್ರಸ್ಟ್ ಹಾಗೂ ಧಾರವಾಡದ ಜಿ.ಬಿ. ಜೋಶಿ ಮೆಮೋರಿಯಲ್ ಟ್ರಸ್ಟ್, ಸಹಯೋಗದಲ್ಲಿ "ತಾರಾನಾದ" ಪುಸ್ತಕ ಬಿಡುಗಡೆ ಹಾಗೂ ಕಿರುಚಿತ್ರ ಲೋಕಾರ್ಪಣೆ ಸಮಾರಂಭ, ಇಂದು ಸಂಜೆ 5.30ಕ್ಕೆ, ಧಾರವಾಡದ ಸೃಜನಾ ರಂಗಮಂದಿರದಲ್ಲಿ ಜರುಗಲಿದೆ.

<><><>

ಹಿರಿಯ ಸಾಹಿತಿ ಚಂದ್ರಶೇಖರ ಕಂಬಾರ ಸಮಾರಂಭವನ್ನು ಉದ್ಘಾಟಿಸಲಿದ್ದಾರೆ. ಬಸವರಾಜ ಕಲ್ಗುಡಿ, ರಮಾಕಾಂತ ಜೋಶಿ, ಪಂಡಿತ ಎಂ.ವೆಂಕಟೇಶ ಕುಮಾರ ಹಾಗೂ ಪಂಡಿತ ಪ್ರವೀಣ ಗೋಡ್ಖಿಂಡಿ ಅತಿಥಿಗಳಾಗಿ ಪಾಲ್ಗೊಳ್ಳಿದ್ದಾರೆ.

<><><>

ಖ್ಯಾತ ಸರೋದ ಮಾಂತ್ರಿಕ ಪಂಡಿತ ರಾಜೀವ ತಾರಾನಾಥರ ಕುರಿತು, ಕಿರು ಚಿತ್ರ ರೂಪಿಸಿರುವ, ಬೆಂಗಳೂರಿನ ನಗುವನ ಕ್ರಿಯೇಷನ್ಸ್‌ನ ಎಚ್.ಆರ್. ಸುಜಾತಾ ಅವರು, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ, ಹಂಚಿಕೊಂಡಿದ್ದಾರೆ.

<><><>

ಎಚ್.ಆರ್.ಸುಜಾತಾ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ **x** ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

ಜೈನ ಧರ್ಮದ 24ನೇ ಹಾಗೂ ಕೊನೆಯ ತೀರ್ಥಂಕರರಾದ, ಭಗವಾನ್ ಶ್ರೀ ಮಹಾವೀರರ ಜಯಂತಿಯನ್ನು, ಶ್ರೀ ಮಹಾವೀರ ಜನ್ಮ ಕಲ್ಯಾಣಕ ಎಂದು, ರಾಜ್ಯಾದ್ಯಂತ ಶ್ರದ್ಧಾ, ಭಕ್ತಿಯಿಂದ ಆಚರಿಸಲಾಯಿತು. ಜಿನ ಮಂದಿರ, ಬಸದಿ ಹಾಗೂ ಜೈನ ದೇವಾಲಯಗಳಲ್ಲಿ, ಜೈನ ಬಂಧುಗಳು ವಿಶೇಷ ಪೂಜಾ ಕೈಂಕರ್ಯಗಳನ್ನು, ನೆರವೇರಿಸಿದರು.

<><><>

ಹಾಸನ ಜಿಲ್ಲೆ, ಶ್ರವಣ ಬೆಳಗೊಳದ, ಚಾವುಂಡರಾಯ ಸಭಾಮಂಟಪದಲ್ಲಿ ಜರುಗಿದ, ಮಹಾವೀರ ಜಯಂತಿ ಕಾರ್ಯಕ್ರಮದಲ್ಲಿ, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪಾಲ್ಗೊಂಡಿದ್ದರು. ಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಮಾತನಾಡಿ, ಭಗವಾನ್ ಮಹಾವೀರ ತೀರ್ಥಂಕರರ, 2 ಸಾವಿರದ 624ನೇ ಜನ್ಮ ಮಹೋತ್ಸವವಿದು ಎಂದರು.

<><><>

ಶ್ರೀ ಮಹಾವೀರ ಜಯಂತಿಯ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡದ ಹಿರಿಯ ಕನ್ನಡ ವಿದ್ವಾಂಸ ಡಾಕ್ಟರ್ ಜಿನದತ್ತ ಹಡಗಲಿ.

<><><>

ಡಾ. ಜಿನದತ್ತ ಹಡಗಲಿ ಧ್ವನಿ 35 ಸೆಕೆಂದುಗಳು

<><><>

ರಾಷ್ಟ್ರೀಯ ಕೈಮಗ್ಗ ಸಪ್ತಾಹವನ್ನು, ಪ್ರತಿ ವರ್ಷ, ಏಪ್ರಿಲ್ 7 ರಿಂದ 14ರ ವರೆಗೆ ಆಚರಿಸಲಾಗುತ್ತದೆ. ರಾಷ್ಟ್ರೀಯ ಕೈಮಗ್ಗ ಸಪ್ತಾಹ, ಕೈಮಗ್ಗ ನೇಯ್ಗೆಯ ಮೂಲಕ, ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ಮಹತ್ವವನ್ನು, ಎತ್ತಿ ತೋರಿಸುತ್ತದೆ. ಲಕ್ಷಾಂತರ ದೇಸಿ ವಸ್ತ್ರ ಖಾದಿ ನೇಕಾರರ ಜೀವನೋಪಾಯವನ್ನು ಸಹ ಬೆಂಬಲಿಸುತ್ತದೆ. ಖಾದಿ ವ್ರತಧಾರಿ,

ಧಾರವಾಡದ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ, ಡಾಕ್ಟರ್ ಸಂಜೀವ ಕುಲಕರ್ಣಿ, ಪ್ರದೇಶ ಸಮಾಚಾರಕ್ಕಾಗಿ, ಕೈಮಗ್ಗ ಮತ್ತ ಖಾದಿ ವಸ್ತ್ರಗಳ ಬಳಕೆಯ ಮಹತ್ವ, ತಿಳಿಸಿದ್ದಾರೆ.

<><><>

ಡಾ. ಸಂಜೀವ ಕುಲಕರ್ಣಿ ಧ್ವನಿ 45 ಸೆಕೆಂದುಗಳು

<><><>

ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ, ಹಾಸನದಲ್ಲಿ ನಾಳೆ ಮತ್ತು ನಾಡಿದ್ದು, ಹಾಸನ ಜಿಲ್ಲೆ ಕಾರ್ಯನಿರತ ಪತ್ರಕರ್ತರ ಸಂಘದ ಸಹಯೋಗದಲ್ಲಿ ಆಯೋಜಿಸಿರುವ, ರಾಜ್ಯ ಮಟ್ಟದ ಪತ್ರಕರ್ತರ ಕ್ರಿಕೆಟ್ ಕ್ರೀಡಾಕೂಟದ ಲಾಂಛನವನ್ನು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಗಳೂರಿನಲ್ಲಿ ಬಿಡುಗಡೆ ಮಾಡಿ, ಶುಭ ಹಾರೈಸಿದರು.

<><><>

ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ, ಐ.ಪಿ.ಎಲ್. – ಇಂಡಿಯನ್ ಪ್ರೀಮಿಯರ್ ಲೀಗ್, ಟಿ–20 ಕ್ರಿಕೆಟ್ ಸರಣಿಯ ಪಂದ್ಯದಲ್ಲಿ, ಡೆಲ್ಲಿ ಕ್ಯಾಪಿಟಲ್ಸ್ ತಂಡ, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು, 6 ವಿಕೆಟ್‌ಗಳಿಂದ ಮಣಿಸಿತು. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ, ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 163 ರನ್ ಗಳಿಸಿತು. ಡೆಲ್ಲಿ ಕ್ಯಾಪಿಟಲ್ಸ್ ತಂಡ, 17 ದಶಾಂಶ 5 ಓವರ್‌ಗಳಲ್ಲಿ, 4 ವಿಕೆಟ್ ನಷ್ಟಕ್ಕೆ 169 ರನ್ ಗಳಿಸಿ, ಜಯ ಸಾಧಿಸಿತು.

<><><>

ಈಗ ಸಂಕ್ಷಿಪ್ತ ಸುದ್ದಿಗಳು

<><><>

ಹಾಸನ ಜಿಲ್ಲೆ, ಬೇಲೂರು ಶ್ರೀ ಚನ್ನಕೇಶವಸ್ವಾಮಿ ಬ್ರಹ್ಮ ರಥೋತ್ಸವ ಹಾಗೂ ಜಾತ್ರಾ ಮಹೋತ್ಸವ, ವಿಜೃಂಭಣೆಯಿಂದ ಜರುಗಿತು.

<><><>

ಉತ್ತರಕನ್ನಡ ಜಿಲ್ಲೆ, ಯಲ್ಲಾಪುರದಲ್ಲಿ ಇಂದು, ಬಿಜೆಪಿ ಜನಾಕ್ರೋಷ ಯಾತ್ರೆ ಆಯೋಜಿತವಾಗಿದೆ ಎಂದು, ಜಿಲ್ಲಾ ಬಿಜೆಪಿ ಅಧ್ಯಕ್ಷ ಎನ್.ಎಸ್.ಹೆಗಡೆ ತಿಳಿಸಿದ್ದಾರೆ.

<><><>

ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ, ವಿ.ಸೋಮಣ್ಣ, ಇಂದು, ಹಾವೇರಿಯ ಶ್ರೀ ಮೈಲಾರ ಮಹಾದೇವಪ್ಪ ರೈಲು ನಿಲ್ದಾಣದಲ್ಲಿ, ಧಾರವಾಡ–ಬೆಂಗಳೂರು ಮಧ್ಯೆ ಸಂಚರಿಸುವ, 'ವಂದೇ ಭಾರತ' ರೈಲು ನಿಲುಗಡೆಗೆ, ಚಾಲನೆ ನೀಡಲಿದ್ದಾರೆ.

<><><>

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಮೇ 10ರ ಒಳಗೆ ಆಸ್ತಿ ತೆರಿಗೆ ಪಾವತಿಸುವವರಿಗೆ, ಶೇಕಡ 5 ರಷ್ಟು ರಿಯಾಯಿತಿ ಪ್ರಕಟಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- **2025–30ನೇ ಸಾಲಿನ, ನೂತನ ಕೈಗಾರಿಕಾ ನೀತಿ; ಹೂಡಿಕೆ, ಉದ್ಯೋಗ ಸೃಷ್ಟಿ ಹಾಗೂ ಸಮತೋಲಿತ ಬೆಳವಣಿಗೆಗೆ ಒತ್ತು – ಎಂ.ಬಿ.ಪಾಟೀಲ.**
- **2024–25ನೇ ಸಾಲಿನ, ಪಂಪ ಪ್ರಶಸ್ತಿ; ಬನವಾಸಿಯಲ್ಲಿ ನಾಳೆ, ಬಿ.ಎ. ವಿವೇಕ ರೈ ಅವರಿಗೆ, ಮುಖ್ಯಮಂತ್ರಿ ಪ್ರದಾನ.**
- **ಸರೋದ ಮಾಂತ್ರಿಕ, ಪಂಡಿತ ರಾಜೀವ ತಾರಾನಾಥ ಕುರಿತ, ಪುಸ್ತಕ ಹಾಗೂ ಕಿರುಚಿತ್ರ, ಧಾರವಾಡದಲ್ಲಿ ಇಂದು, ಚಂದ್ರಶೇಖರ ಕಂಬಾರ, ಬಿಡುಗಡೆ.**
- **ಈ ತಿಂಗಳ 14ರ ವರೆಗೆ, ರಾಷ್ಟ್ರೀಯ ಕೈಮಗ್ಗ ಜಾಗ್ರತಿ ಸಪ್ತಾಹ ಆಚರಣೆ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>